೩) ವಿಕ್ಟೋರಿಯ ಆಸ್ಪತ್ರೆ ಆವರಣದಲ್ಲಿ ಕ್ಷ-ಕಿರಣ ವಿಭಾಗದ ಸಿ.ಟಿ. ಸ್ಕ್ಯಾನ್ ಉಪಕರಣವನ್ನು ಅಳವಡಿಸಲು ಹೊಸ ಕಟ್ಟಡ ನಿರ್ಮಾಣಕ್ಕಾಗಿ ೫.೦೦ ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ.

೪) ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಜೀವಾಣು ವೈದ್ಯಕೀಯ ವಿಭಾಗದ ಸ್ಥಾಪನೆಗಾಗಿ ಹೊಸದಾಗಿ ಕಟ್ಟಣ ನಿರ್ಮಾಣ ಮಾಡಲು ೧.೦೦ ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ.

೫) ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿ ನೆಲಮಹಡಿ ಮತ್ತು ಮೊದಲನೇ ಮಹಡಿಯಲ್ಲಿ ಉಪನ್ಯಾಸ ಭವನ, ಪ್ರಯೋಗಾಲಯ ಕಟ್ಟಡವನ್ನು ನಿರ್ಮಿಸುವ ಸಲುವಾಗಿ ೨೫.೦೦ ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ.

೬) ವಿಕ್ಟೋರಿಯಾ ಆಸ್ಪತ್ರೆಯಲ್ಲಿನ ಮನೋವಿಜ್ಞಾನ ಪುರುಷ ಮತ್ತು ಮಹಿಳಾ ವಿಭಾಗಗಳನ್ನು ಹಾಲಿ ಇರುವ ಕಟ್ಟಡದಲ್ಲಿ ನಿರ್ವಿಸುವ ಸಲುವಾಗಿ ೬.೦೦ ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ

೭) ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪೆಥಾಲಜಿ ವಿಭಾಗಕ್ಕೆ ಹೊಂದಿಕೊಂಡಂತೆ ಇರುವ ಒಂದು ಶವ ಪರೀಕ್ಷಾ ಕಟ್ಟಡ ನಿರ್ಮಿಸುವ ಸಲುವಾಗಿ ೫.೦೦ ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ

ಕಾಮಗಾರಿಗಳನ್ನು (ಕ್ರ.ಸಂ.೨ ರಿಂದ ೭ರವರೆಗಿನ) ಕೈಗೊಳ್ಳಲು ಅನುದಾನ ಒದಗಿಸಿದ್ದು ಸದರಿ ಕಾಮಗಾರಿಗಳಿಗೆ ಸರಿಯಾದ ಸ್ಥಳಾವಕಾಶ ದೊರಕದೇ ಕಾಮಗಾರಿಗಳು ಕುಂಠಿತಗೊಂಡಿದೆ.

೪) ೧) ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿನ ಶೋಧನೆ ಕಟ್ಟಡ ನಿರ್ಮಾಣದ ಅಂದಾಜು ೧೨೫.೦೦ ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಪೂರ್ವ ಮತ್ತು ಮಧ್ಯಮ ಭಾಗದ ಕಾಮಗಾರಿ ಪೂರ್ಣಗೊಂಡಿದೆ ಹಾಗೂ ಪಶ್ಚಿಮ ಭಾಗದ ಕಿದ್ದುಪಡಿ ಕಾರ್ಯ ಮುಕ್ತಾಯ ಹಂತದಲ್ಲಿದೆ.

೨) ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿನ ಹೊರ ರೋಗಿ ವಿಭಾಗದ ಉಳಿದ ಕಟ್ಟಡದ ಕೆಲಸ ೨೫೦.೦೦ ಲಕ್ಷ ರೂ.ಗಳ ಅಂದಾಜು ವೆಚ್ಚದ ಕಾಮಗಾರಿ ಮುಗಿದಿದ್ದು, ವಿದ್ಯುತ್ ಹಾಗೂ ಸುಣ್ಣ ಬಣ್ಣದ ಕೆಲಸ ಪ್ರಗತಿಯಲ್ಲಿದೆ.

೩) ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಹಾಲಿ ಇರುವ ಶಸ್ತ್ರ ಚಿಕಿತ್ಸಾ ವಿಬಾಗಕ್ಕೆ ಹೆಚ್ಚುವರಿ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ(ನಿರ್ಮಾಣ ಮಾಡುವ ಸಲುವಾಗಿ) ೯.೦೦ ಲಕ್ಷ ರೂ.ಗಳ ಅನುದಾನ ಒದಗಿಸಿದ್ದು, ಆದಕ್ಕೆ ಬೇಕಾಗುವ ಹೆಚ್ಚುವರಿ ಅನುದಾನವನ್ನು ಕ್ಷ-ಕಿರಣ ವಿಭಾಗಕ್ಕೆ ಒದಗಿಸಿರುವ ಅನುದಾನದಿಂದ ವರ್ಗಾಯಿಸಿ ಮರುಹೊಂದಾಣಿಕೆ ಮಾಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

೪) ಸುಟ್ಟಗಾಯಗಳ ವಿಭಾಗದ ಕಟ್ಟಡ ನಿರ್ಮಾಣಕ್ಕಾಗಿ ೧೦.೦೦ ಲಕ್ಷ ರೂ.ಗಳ ಅನುದಾನದೊಂದಿಗೆ ಕಾಮಗಾರಿ ಪ್ರಗತಿಯಲ್ಲಿದೆ.

೫) ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿನ ಫಾರ್ಮಸಿ ಕಟ್ಟಡ ನಿರ್ಮಾಣದ ಕಾಮಗಾರಿ ಪೂರ್ಣಗೊಂಡಿದ್ದು ಫಾರ್ಮಾಸಿ ಘಟಕ ಕಾರ್ಯವನ್ನು ಪ್ರಾರಂಭಿಸಿದೆ.

೬) ಮೈಸೂರಿನ ಕೆ.ಆರ್. ಆಸ್ಪತ್ರೆಯ ಶವಾಗಾರ ವಿಭಾಗದ ಕಟ್ಟಡ ಪೂರ್ಣಗೊಂಡಿದೆ,

ಪೂರ್ಣ ವೇತನ ಪಡೆಯುತ್ತಿರುವ ಶಿಕ್ಷಕರನ್ನು ಖಾಯಂ ಗೊಳಿಸುವುದು

೪೯೦ (೬೮೮) ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೆಕೆರೂರು).—ಮಾನ್ಯ ಪಯಸ್ಕರ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಪೂರ್ಣ ವೇತನ ಪಡೆಯುತ್ತಿರುವ ಹಾಗೂ ಪೂರ್ಣಾವಧಿ ಸೇವೆ ಸಲ್ಲಿಸುತ್ತಿರುವ ವೃತ್ತಿ ಶಿಕ್ಷಕರ ಸಂಖ್ಯೆಯೆಷ್ಟು ?

ಆ) ಈ ಮೇಲ್ಕಾಣಿಸಿದ ವೃತ್ತಿ ಶಿಕ್ಷಕರನ್ನು ಖಾಯಂಗೊಳಿಸಿ ಎಲ್ಲಾ ಸರ್ಕಾರಿ ಸೇವೆ ಸೌಲಭ್ಯಗಳನ್ನು ಕೂಡಲೇ ಒದಗಿಸುವುದಾಗಿ ಸರ್ಕಾರ ಸಂಬಂಧಪಟ್ಟವರೊಡನೆ ಚರ್ಚಿಸಿ ನಿರ್ಣಯ ತೆಗೆದು ಕೊಂಡಿದ್ದು ಸರ್ಕಾರದ ಗಮನದಲ್ಲಿದೆಯೇ ?

ಇ) ಹಾಗಿದ್ದಲ್ಲಿ ಆ ಬಗ್ಗೆ ಈವರೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಈ) ವೃತ್ತಿ ಶಿಕ್ಷಕರನ್ನು ಖಾಯಂ ಶಿಕ್ಷಕರನ್ನಾಗಿ ಹಂತಹಂತವಾಗಿ ನೇಮಿಸಿಕೊಳ್ಳಲು ಸರ್ಕಾರ ಒಪ್ಪಿದ್ದು - ಆ ಬಗ್ಗೆ ಸರ್ಕಾರದ ನೀತಿ ಹಾಗೂ ಕ್ರಮಗಳೇನು ?

ಶ್ರೀ ಪ್ರಭಾಕರ್ ಎಸ್. ರಾಣೆ (ವಯಸ್ಕರ ಶಿಕ್ಷಣ ರಾಜ್ಯ ಸಚಿವರು),—

ಅ) ವೃತ್ತಿ ಶಿಕ್ಷಣ ಕೋರ್ಸಿನಲ್ಲಿ ಸೇವೆ ಸಲ್ಲಿಸುತ್ತಿರುವ ಪೂರ್ಣಕಾಲಿಕ ಸಿಬ್ಬಂದಿ ಸಂಖ್ಯೆ ಈ ಕೆಳಕಂಡಂತಿದೆ :

ಸರ್ಕಾರಿ	:	೦೩
ಅನುದಾನಿತ	:	೭೦
ಒಟ್ಟು		೭೩

ಆ) ಸರ್ಕಾರದ ಗಮನದಲ್ಲಿದೆ,

ಇ) ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಈ) ಈ ಬಗ್ಗೆ ಸಾಧಕಬಾಧಕಗಳನ್ನು ಪರಿಶೀಲಿಸಲಾಗುತ್ತಿದೆ.

ಮೀನುಗಾರರಿಗೆ ಕಲ್ಯಾಣ ನಿಧಿ

೪೯೧ (೪೫೯) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ). —ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಶಿಕಾರಿಪುರ ತಾಲ್ಲೂಕಿನಲ್ಲಿ "ಮೀನುಗಾರರ ಕಲ್ಯಾಣ ನಿಧಿ ಯಿಂದ" ಕಿಟ್ಟದಹಳ್ಳಿ, ಕವಾಸಪುರ, ಕೊಪ್ಪದಕೆರೆ ಮೀನುಗಾರರಿಗೆ ವಾಸಿಸಲು ಮನೆ ಮಂಜೂರಾಗಿರುವುದು ನಿಜವೇ ?

ಆ) ಮಂಜೂರಾಗಿದ್ದರೆ ಯಾವಾಗ ಮಂಜೂರಾಗಿದೆ ?

ಇ) ಮನೆ ಕಟ್ಟಲು ಯಾರಿಗೆ ವಹಿಸಿಕೊಡಲಾಗಿದೆ ?

ಈ) ಶಿವಮೊಗ್ಗ ಜಿಲ್ಲೆಯಲ್ಲಿ ಬೇರೆ ಯಾವುದಾದರೂ ತಾಲ್ಲೂಕಿನಲ್ಲಿ ಈ ಯೋಜನೆಯಡಿ ಮನೆ ಕಟ್ಟಲಾಗಿದೆಯೇ ?

ಉ) ಶಿಕಾರಿಪುರ ತಾಲ್ಲೂಕಿನಲ್ಲಿ ಮೀನುಗಾರರಲ್ಲದವರಿಗೆ ಕೆಲವು ಗ್ರಾಮಗಳಲ್ಲಿ ಮನೆ ಕಟ್ಟಿಸಲು ಪ್ರಯತ್ನ ನಡೆದಿರುವುದು ನಿಜವೇ ?

ಊ) ಮೀನುಗಾರರಲ್ಲದವರಿಗೆ ಈ ಯೋಜನೆಯಲ್ಲಿ ಮನೆ ಕಟ್ಟಲು ಅವಕಾಶವಿದೆಯೇ ?

ಋ) ಶಿಕಾರಿಪುರ ತಾಲ್ಲೂಕಿನಲ್ಲಿ ಸಹಾಯಕ ನಿರ್ದೇಶಕರ ಹುದ್ದೆ ಖಾಲಿ ಇರುವುದು ನಿಜವೇ ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು).—

ಅ) ಇಲ್ಲ.

ಆ) ಅನ್ವಯಿಸುವುದಿಲ್ಲ,

ಇ) ಅನ್ವಯಿಸುವುದಿಲ್ಲ.